# ಕಾನನ

SEPTEMBER 2013

ನಿಸರ್ಗದೆಡೆಗೆ ಪಯಣ



BANNERUGHATTA

**WILDLIFE CONSERVATION GROUP**



# ಕಾನನ

SEPTEMBER 2013

ನಿಸರ್ಗದೆಡೆಗೆ ಪಯಣ

ಲೇಖನಗಳು

* ಶರಣಾಗತಿ
* ಹಕ್ಕಿಲೋಕ
* ವಿ ವಿ ಅಂಕಣ
* ಇರುವೆ ಮತ್ತು ಏಪಿಡ್
* ಮಳೆಗಾಲದಲ್ಲಿ (ಕವನ)

ಸಂಪಾದಕರು : ಅಶ್ವಥ ಕೆ.ಎನ್ ವಿನ್ಯಾಸ : ನಾಗೇಶ್ ಓ.ಎಸ್

ಲೇಖನ ವೃಂದ : ಸ್ವಾಮಿ ಸೌಖ್ಯಾನಂದಜೀ ಮಹಾರಾಜ್,
ಅಶ್ವಥ ಕೆ.ಎನ್, ಶಂಕರಪ್ಪ ಕೆ.ಪಿ, ಧನರಾಜ್ ಎಂ, ಕೃಷ್ಣನಾಯಕ್.

ಕರಡು ತಿದ್ದುಪಡಿ : ಮುರಳಿ ಎಸ್.

E-mail : kaanana.mag@gmail.com





ಅಂತರಾಷ್ಟ್ರೀಯ ಓಝೋನ್ ದಿನದ ಈ ಸಂದರ್ಭದಲ್ಲಿ ನಮಗೆ ಆಸರೆಯಾಗಿರುವ ಈ ಭೂ ತಾಯಿಯ ಮೇಲೆ ನಡೆಯುತ್ತಿರುವ ವಂಚನೆಗಳು ಇಂದು ಮನುಷ್ಯ ಮತ್ತು ಪರಿಸರದ ನಡುವೆ ನರಿ ಮತ್ತು ಕರಡಿಯ ಕತೆಯಾಗಿ ಉಳಿದಿದೆ. ಈ ಬುದ್ಧಿವಂತ ನರಿ ಮನುಷ್ಯ ಅನುಸರಿಸುತ್ತಿರುವ ನೀತಿ, "ಕೊಂಬೆಯಲ್ಲಿ ಚಿಂತನೆ, ಬೇರಿನಲ್ಲಿ ವಂಚನೆ" ಎನ್ನುವಂತಾಗಿದೆ. ಇಂದು ತೀವ್ರವಾಗಿ ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಪೂರೈಸಲೆಂದು ಕೃಷಿ ಭೂಮಿಯನ್ನು ವಿಸ್ತರಿಸಿದಂತೆಲ್ಲ ಅರಣ್ಯದ ವಿಸ್ತೀರ್ಣ ಕಡಿಮೆಯಾಗುತ್ತಿದೆ, ವಸತಿಹೀನರಿಗೆ ಆಶ್ರಯ ಮನೆ ಕಟ್ಟಲೆಂದು ಭೂಮಿ ವಶಪಡಿಸಿಕೊಂಡಂತೆಲ್ಲ ಊರಾಚಿನ ಗೋಮಾಳಗಳು ಕಣ್ಮರೆಯಾಗುತ್ತಿವೆ. ನಿರುದ್ಯೋಗಿಗಳಿಗೆ ಅನುಕೂಲವಾಗಲೆಂದು ಗ್ರಾನೈಟ್ ಗಣಿಗಾರಿಕೆ ಅನುಮತಿ ನೀಡಿದರೆ ವನ್ಯಜೀವಿಗಳು ನಿರ್ನಾಮವಾಗುತ್ತವೆ. ನೀರೆತ್ತುವ ಪಂಪ್ ಸೆಟ್ ಗಳಿಗೆ ವಿದ್ಯುತ್ ಜೋಡಣೆ ಮಾಡಿದಷ್ಟೂ ಅಂತರ್ಜಲ ಮಟ್ಟ ಪಾತಾಳಕ್ಕಿಳಿಯುತ್ತದೆ; ವಿದ್ಯುತ್ ಉತ್ಪಾದನೆಗೆಂದು ಅಣೆಕಟ್ಟು ಕಟ್ಟಿದರೆ ನಿರ್ಗತಿಕರ ಸಂಖ್ಯೆ ಹೆಚ್ಚಾಗಿ ನಗರಗಳಲ್ಲಿ ಕೊಳಗೇರಿಗಳ ವಿಸ್ತೀರ್ಣ ವಿಶಾಲವಾಗುತ್ತಿವೆ.

ನಮ್ಮ ಮತದಾರರ ಜೀವನ ಮಟ್ಟವನ್ನು ಎತ್ತಲು ಯತ್ನಿಸಿದಷ್ಟು ವಿಶ್ವಮಟ್ಟದಲ್ಲಿ ನಿಸರ್ಗ ಸಮತೋಲನ ಬಿಗಡಾಯಿಸುತ್ತಲೇ ಹೋಗುತ್ತಿದೆ. ಭೂಮಿಯ ವಾತಾವರಣ ಬಿಸಿಯಾಗುತ್ತಿದೆ; ಓಝೋನ್ ರಕ್ಷಾಕವಚ ಛಿದ್ರವಾಗುತ್ತಿದೆ. ಆಮ್ಲ ಮಳೆ ಅಲ್ಲಲ್ಲಿ ಸುರಿಯುತ್ತಿದೆ. ಹಿಮ ಖಂಡಗಳು ಕರಗುತ್ತಿವೆ. ಮಳೆಮಾರುತಗಳು ದಿಕ್ಕು ಬದಲಾಯಿಸುತ್ತಿವೆ. ಇವೆಲ್ಲಕ್ಕಿಂತ ಮುಖ್ಯವಾಗಿ ಜೀವ ವೈವಿಧ್ಯ ನಾಶವಾಗುತ್ತಿದೆ. ನಮಗೆ ಇನ್ನೂ ಬುದ್ಧಿಬಂದಿಲ್ಲ ಬಿಡಿ!. ಎಂಬ ಮಾತುಗಳನ್ನು ಈ ನಮ್ಮ ಜಗತ್ತಿಗೆ ಸಾರಿ ಹೇಳುತ್ತಿರುವ ವ್ಯಕ್ತಿ ಯಾರು ಗೊತ್ತೇ! ನಮ್ಮ *ಖ್ಯಾತ ಪರಿಸರ ತಜ್ಞ ನಾಗೇಶ ಹೆಗಡೆಯವರು* "*ಪ್ರತಿದಿನ ಪರಿಸರ ದಿನ*" ಎಂಬ ಕೃತಿಯಲ್ಲಿ ಹೇಳಿರುವ ಈ ಮೇಲಿನ ಮಾತುಗಳನ್ನು ನಾವು ಈ ಅಂತರಾಷ್ಟ್ರೀಯ ಓಝೋನ್ ದಿನದಂದು ನಾವೆಲ್ಲರು ನೆನೆಯಬೇಕು, ಇಂದು ಅವುಗಳ ಬಗ್ಗೆ ಚಿಂತನೆಗಳು ನಡೆಯಬೇಕಾಗಿದೆ.

**ಅರಣ್ಯ, ವನ್ಯಜೀವಿ, ಪರಿಸರ ಸಂರಕ್ಷಣೆ, ವಿಜ್ಞಾನ, ವನ್ಯಜೀವಿ ಛಾಯಾಚಿತ್ರ, ಕವನ, ಕಥೆಗಳು ಹಾಗೂ ಲೇಖನಗಳನ್ನು ತಾವೂ ಕಾನನಕ್ಕೆ ಬರೆಯಬಹುದು.**

ವಿಳಾಸ : **kaanana.mag@gmail.com**

**Wildlife Conservation Group**



# ಆಧ್ಯಾತ್ಮದಲ್ಲಿ ವನ್ಯಜೀವಿಗಳು

## ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ಪ್ರಾಣಿಪಕ್ಷಿಗಳು


### ★ ಶರಣಾಗತಿ

ಶರಣಾಗತಿ ಎಂದರೆ ಭಗವಂತನಲ್ಲಿ ಶರಣಾಗುವುದು ಮನುಷ್ಯ ತನ್ನ ಎಲ್ಲ ಪ್ರಯತ್ನಗಳನ್ನು ಮಾಡಿದ ನಂತರ ಭಗವಂತನಲ್ಲೆ ಶರಣಾಗಿ ಅವನ ಕೃಪೆಗೆ ಹೇಗೆ ಕಾಯುತ್ತಾನೆಂದು ಶ್ರೀ ರಾಮಕೃಷ್ಣರ ಈ ಕತೆ ಯ ಮೂಲಕ ಬಹಳ ಸ್ವಾರಸ್ಯವಾಗಿ ತಿಳಿಸಿದ್ದಾರೆ.




ಒಂದು ಸಲ ಒಂದು ಹಡಗಿನ ಪಟಸ್ತಂಭದ ಮೇಲೆ ಒಂದು ಪಕ್ಷಿ ಕುಳಿತಿತ್ತು. ಹಡಗು ಯಾವಾಗ ಯಾನ ಹೊರಟಿತೋ ಅದಕ್ಕೆ ಗೊತ್ತಾಗಲಿಲ್ಲ, ಯಾವಾಗ ಅದಕ್ಕೆ ಅನಂತ ಸಾಗರದ ಅರಿವಾಯಿತೋ ಆಗ ಅದು ದಡವನ್ನು ಅರೆಸುತ್ತಾ ಪಟಸ್ತಂಭವನ್ನು ಬಿಟ್ಟು ಉತ್ತರಕ್ಕೆ ಹಾರಿತು. ಆದರೆ ದಡದ ಚಿಹ್ನೆಯೇ ಸಿಗದೆ ತಿರುಗಿ ಬಂದು ಪಟಸ್ತಂಭದ ಮೇಲೆ ಕುಳಿತು ಸ್ವಲ್ಪ ಸಮಯದ ನಂತರ ದಕ್ಷಿಣ ದಿಕ್ಕಿಗೆ ಹಾರಿತು. ಅಲ್ಲೂ ಸಹ ಅದಕ್ಕೆ ದಡ ಕಾಣದೆ ಪುನಃ ಬಂದು ಧ್ವಜ ಸ್ತಂಭದ ಮೇಲೆ ಕುಳಿತಿತು. ಪೂರ್ವ ಪಶ್ಚಿಮಕ್ಕೆ ಪ್ರಯತ್ನಸಿದ ನಂತರ ಬಂದು ಸ್ತಂಭದ ಮೇಲೆ ಕುಳಿತು ಯಾವಾಗಲಾದರೂ ಹಡಗು ದಡಸೇರಿಸಲಿ ಎಂದು ಸುಮ್ಮನೆ ಕುಳಿತಿತ್ತು. ಆಗ ಅದಕ್ಕೆ ನಿಶ್ಚಿಂತೆ. ಆಗ ಮನುಷ್ಯನು ಸಹ ತನ್ನ ಎಲ್ಲಾ ಪ್ರಯತ್ನಗಳನ್ನ ಭಗವಂತನಲ್ಲಿ ಸಂಪೂರ್ಣ ಶರಣಾದ ಅವನಿಗೆ ಶಾಂತಿ ನೆಮ್ಮದಿ.

- ಸ್ವಾಮಿ ಸೌಖ್ಯಾನಂದಜೀ ಮಹಾರಾಜ್



# ಹಕ್ಕಿ ಲೋಕ



## * ಗುಟ್ಟೆಯ ಪಾರಿವಾಳ


**ವೈಜ್ಞಾನಿಕ ಹೆಸರು:** *Columba livia*

**ಇಂಗ್ಲೀಷ್ ಹೆಸರು:** Blue Rock Pigeon




ರಾಗಳ್ಳಿ ದಾರಿ, ಡಾಂಬರು ಕಂಡು ಹತ್ತು-ಹದಿನೈದು ವರುಷವಾಗಿರಬೇಕು. ದಾರಿ ಎಲ್ಲಾ ಡಾಂಬರು ಕಿತ್ತುಹೋಗಿ ದೊಡ್ಡ ದೊಡ್ಡ ಗುಂಡಿಬಿದ್ದು. ಮಳೆಗಾಲವಾದ್ದರಿಂದ ಗುಂಡಿಗಳಲ್ಲಿ ನೀರುನಿಂತು, ನೀರೆಲ್ಲ ಕೆಸರಾಗಿ, ಓಡಾಡುವ ಜನಗಳಿಗೆ ಕಾಲು ಇಡಲು ಜಾಗವಿಲ್ಲದೆ ಕೆಸರಿನ ಮಧ್ಯೆ ಕಾಲ್ಲಿಟ್ಟು, ತಮ್ಮ ಮುಖಚರ್ಮ, ಹಲ್ಲುಗಳನ್ನು ಹ್ಹಿ. . .ಎಂದು ಬಿಗಿಹಿಡಿದು, ಮೆಲ್ಲನೆ ನಡೆಯಬೇಕಿತ್ತು. ಲಾರಿಗಳೇನಾದರು ಬಂದರೆ ದಾರಿಯಿಂದ ಪರಲಾಂಗು ದೂರ ಹೋಗಿ ನಿಲ್ಲಬೇಕಿತ್ತು. ಕೆಸರನ್ನು ಪಚ್. . .ಪಚ್. . .ಎಂದು ಎಗರಿಸುತ್ತಾ ಹೋಗುತ್ತಿದ್ದವು. ಅದೇ ದಾರಿಯ ಪಕ್ಕದಲ್ಲೇ ಇರುವ ಪಾರೆಸ್ಟ್ ಡಿಪಾರ್ಟ್ ಮೆಂಟಿನವರು ಕಟ್ಟಿಸಿರುವ ಮನೆ, ವೆಂಕ್ಟಪ್ಪ ಗಾರ್ಡ್ನ ಸಂಸಾರ ಅಲ್ಲೆ ನೆಲೆ ಊಡಿತ್ತು.

ವೆಂಕ್ಟಪ್ಪ ಗಾರ್ಡ್ನ ಹೆಂಡತಿ ಸ್ವಲ್ಪ ದೂರದಲ್ಲಿದ್ದ ಬೋರ್ವೆಲ್ಗೆ ನೀರಿಗಾಗಿ ಅದೇ ದಾರಿಲ್ಲಿ ಹೋಗಿ ಬರಬೇಕಿತ್ತು. ಆ ಕೆಸರು ಗುಂಡಿಗಳ ನಡುವೆ ಹೆಜ್ಜೆ ಇಡಲೋ ಬೇಡವೋ ಎಂಬಂತೆ ಮೆಲ್ಲನೆ ಬಿಂದಿಗೆಯ ಹಿಡಿದು ಹೋಗುತ್ತಿದ್ದಳು. ದೂರದಿಂದಲೆ ಯಾರೋ ಹೆಂಗಸು ನೀರು ಹಿಡಿಯುತ್ತಿದ್ದದ್ದನ್ನು ನೋಡಿ, ಅಲ್ಲಿಯೇ ಕಾದುನಿಂತು, ಆಕೆ ನೀರುತುಂಬಿಸಿಕೊಂಡು ಹೋದ ಮೇಲೆ ಬೋರ್ವೆಲ್ ಬಳಿಗೆ ಹೋದಳು, ಈ ವೆಂಕ್ಟಪ್ಪ ಗಾರ್ಡ್ನ ಹೆಂಡತಿಯೂ ಅಷ್ಟೇನೂ ಲಕ್ಷಣವಾಗಿಲ್ಲದ್ದಿದ್ದರು, ಅವಳ ಒಳ ಮನುಸ್ಸು ಕೂಡ ಹಾಗೆಯೇ ಇತ್ತು ಬಿಡಿ!, ಶುಚ್ಚಿತ್ವದ ಬಗ್ಗೆ ಗಮನಕೊಟ್ಟರೆ ಪರವಾಗಿಲ್ಲ, ಆದರೆ ಜಾತಿಯ ಬಗ್ಗೆ ಇದ್ದ ಅಳುಕು ಸರಿಯಿರಲ್ಲಿಲ್ಲ ಬಿಡಿ. ಹೆಚ್ಚಾಗಿ ಕುರುಬರೆ ಇರುವ ವಾಜರಗುಡಿಸಿಲಿನಲ್ಲಿ, ಯಾರಾದರು ಕುರುಬ ಹೆಂಗಸು ಬೊರ್ವೆಲ್ನಲ್ಲಿ ನೀರು ಹಿಡಿದುಹೋದದ್ದನ್ನು ಈಕೆ ನೋಡಿದರೆ,



ಅವರು ಹೋದ ಬಳಿಕ ಇಡೀ ಬೋರ್ವೆಲ್ಲನ್ನೆ ತೊಳೆದು ಸಾರಿಸಿ ನಂತರ ನೀರು ಹಿಡಿಯುತ್ತಿದ್ದ ಹೆಂಗಸು ಈ ವೆಂಕ್ಟಪ್ಪ ಗಾರ್ಡ್ನ ಹೆಂಡತಿ. ಮನೆಯ ಎದುರು ರಸ್ತೆಯಲ್ಲಿ ನಿಂತು ಇದನ್ನೆ ದಿಟ್ಟಿಸಿ ನೋಡುತ್ತಾ ನಿಂಥ ವೆಂಕ್ಟಪ್ಪ ಗಾರ್ಡು, “ಥು. . .ಇವಳ!, ಇನ್ನೇನಾದ್ರು ಬ್ರಮಣ್ರು ಒಟ್ಟೇಲಿ ಹುಟ್ಟಿದ್ರೆ ಇವಳ್ನಾ ಇಡಿಯಾಕೆ ಆಗ್ತಿರ್ಲಿಲ್ಲ” ಎಂದು ಪೇಚಾಡುತ್ತಾ, ಗಂಟೆ ಒಂಬ್ಬತದರೂ ಇನ್ನೂ ವಾಚರ್ ಗುಟ್ಟಿ, ಪೆದ್ದಣ್ಣ, ನಾರಾಯಣರು ಬರದಿದ್ದನ್ನು ಎದುರು ನೋಡುತ್ತಿದ್ದ. “ಥುತ್ ಇವ್ರೂ ಮನೆಕಾಯೋಗ. . .!ಡ್ಯೂಟಿಗೆ ಟಾಯ್ಮ್ ಆದ್ರೂ ಇನ್ನೂ ಬಂದಿಲ್ಲ” ಎಂದು ತನ್ನ ಪಕ್ಕದಲ್ಲಿದ್ದ ಚಿಕ್ಕಮರಿಗೆ ಹೇಳುತ್ತಿದ್ದ.

ಎದುರಿಗೆ ನೀರಿನ ಕೊಡವನ್ನು ಎತ್ತಿಕೊಂಡು ಬರುವ ಹೆಂಡತಿಯನ್ನು ನೋಡಿ, ಅವಳು ಮಾಡಿದ ಚೇಷ್ಟೆಗಳನ್ನು ನೋಡಿ, ಮತ್ತು ಈ ವಾಚರ್ ಗುಟ್ಟಿ, ಪೆದ್ದಣ್ಣರೂ ಇಷ್ಟು ಹೊತ್ತಾದರು ಬಾರದೇ ಇದ್ದದ್ದನ್ನು ಸಹಿಸಕೊಳ್ಳಲಾಗದೆ ರೋಸಿಹೋಗಿ, ಗುಟ್ಟಿ ಪೆದ್ದಣ್ಣರ ಕೋಪವನ್ನು ತನ್ನ ಹೆಂಡತಿಯ ಮೇಲೆ ಬಿಟ್ಟು. “ಹ. . .ಹ. . .ಹ. . .ಇನ್ನೂ ರೋಡು-ಬೀದಿ! ಎಲ್ಲಾನ್ನೂ ಸಾರಿಸಿ ಬರಬೇಕಿತ್ತು. ಏನೂ. . .ಅವರು ಮನುಷ್ಯರಲ್ಲ. . .!, ಎಲ್ಲೂ ದೆವ್ವುಗ್ಳು ನೋಡು. . .ಇನ್ನೂ ಚೆನ್ನಾಗಿ ತೊಳೆದು ತರಬೇಕಿತ್ತು. ಈ ನೀರನ್ನ, ಉಸಾರು, ಎಲ್ಲಾದ್ರೂ ಜಾತಿಗೀತಿ ಎನ್ನರೂ ಕೆಟ್ಟೋದತ್ತು”. ಎಂದು ಜೋರಾಗಿಯೇ ಬಯ್ಯುತ್ತಿದ್ದ. “ಏ. . .ಏನೋ ಗಲೀಜು ಗೀಲಿಜು ಇತ್ತೇನ್ನೋ, ಕಿಲೀನು ಮಾಡವ್ವರೆ ಬುಡಿ ಸರ್. . .!ಅದ್ಯಾಕಾ ಹಾಂಗ್ ಬಯ್ಯಿತ್ತಿರಾ?” ಎಂದ ಪಕ್ಕದಲ್ಲಿದ ಚಿಕ್ಕಮರಿ. “ಆಯ್ತು ಬುಡೋ ಅವೆಲ್ಲ ನಿಂಕ್ಕ ತಿಳಿಯಾಕಿಲ್ಲ, ಅವ್ರು ಎಲಾವ್ರೆ ನೋಡ್ಕೊ ಬಾಹೋಗು” ಎಂದು ಚಿಕ್ಕಮರಿಯನ್ನು ಬೇಗಳ್ಳಿ ಕಡೆ ಕಳಿಸಿದ.

ರೋಡಿನಲ್ಲೇ, ಎದುರು ನೋಡುತ್ತಾ ನಿಂತ ವೆಂಕ್ಟಪ್ಪ ಗಾರ್ಡು, ತನ್ನ ಪ್ಯಾಂಟಿನ ಜೇಬಿಗೆ ಕೈಯನ್ನು ಇಳಿಬಿಟ್ಟು, ಬೀಡಿಯ ಕಟ್ಟನ್ನು ತೆಗೆದು ತನ್ನ ಎರಡು ಕೈ ಹಸ್ತಗಳಿಂದ ಬೀಡಿ ಕಟ್ಟನ್ನು ಸರಸರ. . .ಎಂದು ಉಜ್ಜಿ, ಮೇಲಿನ ಮುಚ್ಚಳದ ಕಾಗದವನ್ನು ಪರ್. . .ಎಂದು ಹರಿದು, ಒಂದು ಬೀಡಿಯನ್ನು ಎಳೆದುಕೊಂಡು ತನ್ನ ಎಡಗೈ ಬೆರಳುಗಳಿಂದ ಬೀಡಿಯ ತುದಿಯನ್ನು ಒಂದೆರಡು ಸರಿ ಚಿರ್. . .ಚಿರ್. . .ಎಂದು ಒಸುಕಿ, ತನ್ನ ತುಟಿಗಳ ಮಧ್ಯೆ ಇರುಕಿಸಿ, ಜೇಬಿನಿಂದ ಬೆಂಕಿಪೊಟ್ಟಣ ತೆಗೆದು, ತುಟಿಗಳ ನಡುವೆ ಇದ್ದ ಬೀಡಿಯನ್ನು ತನ್ನ ಹಲ್ಲುಗಳಿಂದ ಕಚ್ಚಿ ಬಿಗಿ ಇಡಿದು, ಬೆಂಕಿ ಪೊಟ್ಟಣದ ಒಳಗೆ ಕಡ್ಡಿಯನ್ನು ತೆಗೆದು ಸರಸರ. . .ಗೀರೀ. . . ಗೀರೀ. . ಕೊನೆಗೆ ಭಗ್ಗನೆ ಹತ್ತಿದ ಕಡ್ಡಿಯನ್ನು ಗಾಳಿಗೆ ಹಾರದಿರಲಿ ಎಂದು ತನ್ನ ಎರಡು ಕೈಯಿಂದ ಕಾಪುಕಟ್ಟಿ, ಬಾಯಲಿದ್ದ ಬೀಡಿಗೆ ಬೆಂಕಿ ತಗುಲಿಸಿ ಒಂದೆರಡು ಬಾರಿ ಬುಸು ಬುಸು ಎಂದು ಹೊಗೆ ಹೊಗೆಯನ್ನು ಉಗಿ ಬಂಡಿಯಂತೆ ಆಕಾಶಕ್ಕೆ ಬಿಟ್ಟು ದಾರಿಯನ್ನು ಮತ್ತೆ ದಿಟ್ಟಿಸಿನೋಡಿದ.

ದೂರದಲ್ಲಿ ಗುಟ್ಟಿ, ಪೆದ್ದಣ್ಣ, ನಾರಾಯಣರು ಬರುವುದು ಕಾಣಿಸಿತು. ಹತ್ತಿರ ಬರಲಿ ಇವರಿಗೆ ಸರಿಯಾಗಿ ಮಾಡಬೇಕು ಎಂದು ಮನಸ್ಸಿನಲ್ಲೇ ಅಂದುಕೊಂಡು, ಮನೆಯ ಜಗಲಿ ಮೇಲೆ ಕುಳಿತುಕೊಂಡ. ಮೊದಲು ಗುಟ್ಟಿ ಬಂದವನೆ ಸೆಲ್ಯೂಟ್ ಹೊಡೆದು “ನಮಸ್ಕಾರ ಸರ್” ಎಂದ. ಎಲ್ಲಾರು ಗುಟ್ಟಿಯನ್ನು ಅನುಸರಿಸಿದರು. “ಎಷ್ಟೋತ್ಕೊ

ಬರೋದು ನೀವೂ. . .ಡ್ಯೂಟಿಗಾ. . .ಆ. . .ಸಹೇಬ ಸುಮ್ನೆ ಇರತನ ಈ ಟೈಮ್ಗಬಂದ್ರೆ". ಎಂದು ಎಲ್ಲರನ್ನು ಸೇರಿಸಿ ಬಯ್ದು "ಹೋಗಿ ಹೋಗಿ. . .ಅಲ್ಲ, ಹಾವ್ಬಂಡೆ ಹಳ್ಳದಲ್ಲಿ ಆನೆ ರಬ್ಬರ್ವಾಲ್ ಹೊಡ್ದುದಂತೆ ರಾತ್ರೆ, ನೋಡ್ರಿ", ಎಂದು ಹೇಳಿ ಕಳುಹಿಸಿದ. ಮತ್ತೆ ಏನೋ ನೆನಪಿಗೆ ಬಂದು "ಏ ಅಲ್ಲೆ ನಿಂತ್ಕೋಳ್ರೋ. . .ನಾಳೆ ಬೆಳಿಗ್ಗೆ ಕರಡಿ ಸಫಾರಿ ಓಪನಂತೆ, ಸಾಹೇಬ ಹೇಳವನ್ನೆ ಎಲ್ರೂ ಬೆಳಗ್ಗೆ ಏಂಟು ಗಂಟ್ಗೆ ಅಲ್ಲಿರಬೇಕು ಅಂಥ. ವೈಲ್ಡ್ ಲೈಫೋರು. . .ಅವ್ರು ಝೂನೋರು ಎಲ್ಲಾ ಬತ್ತರಂತೆ, ಬಂದಬಿಡ್ರಿ ಬೆಳ್ಗೆನೇ". ಎಂದು ಹೇಳಿ ಕಳುಹಿಸಿದ.



ವೆಂಕ್ಟಪ್ಪ ಗಾರ್ಡು ಹೇಳಿದಂತೆ ಬೆಳಿಗ್ಗೆ ಎಂಟುಗಂಟೆಗೆ ಎಲ್ಲಾರು ಹಾಜರಿದ್ದು, ಕಾರ್ಯಕ್ರಮಕ್ಕೆ ಬೇಕಾದ ಎಲ್ಲ ವಸ್ತುಗಳನ್ನು ತಂದು ವೇದಿಕೆಯನ್ನು ಸಿದ್ದಪಡಿಸಬೇಕಾದರೆ ರೆಂಜರು ತಂದಿದ್ದ ಹೂವಿನ ಹಾರಗಳು, ಫಲಪುಷ್ಪಗಳು, ಜೇಬಿಗೆ ಇಳೆಬಿಡುವ ಬ್ಯಾಡ್ಜಗಳು, ಹ್ಯಾಟ್ಗಳು, ಕಾರ್ಯಕ್ರಮ ಮುಗಿದ ಮೇಲೆ ಸಿಹಿಕೊಡಲೆಂದು ತಂದಿದ್ದ ಬೂಂದಿ ಪ್ಯಾಕೇಟ್ಗಳ ರಾಶಿಯ ನಡುವೆಯೇ ಒಂದು ಪಂಜರದಲ್ಲಿ ನಾಲ್ಕೈದು ಪಾರಿವಾಳಗಳು ಕಾಗೆಗಿಂತ ಚಿಕ್ಕದಾದ ನೀಲಿ ಮಿಶ್ರಿತ ಕಡು ಬೂದುಹಕ್ಕಿ, ಬಾಲ ಮತ್ತು ರೆಕ್ಕೆಯ ಮೇಲೆ ಕಪ್ಪು ಪಟ್ಟಿ, ಕತ್ತಿನ ಸುತ್ತ ಮಿರುಗುವ ನೀಲಿಹಸಿರು ಹಾಗೂ ನೇರಳೆ ಬಣ್ಣವಿರುವ ಹಕ್ಕಿಗಳನ್ನು ನೋಡಿ ಪಾರಿವಾಳಗಳೆಂದು ಖಾತ್ರಿಪಡಿಸಿಕೊಂಡು. ಗುಟ್ಟಿಗೆ "ಇವೆಲ್ಲ ಸರಿ! ಈ ಪಾರಿವಾಳಗ್ಳು ಯಾತ್ಕೆ ಬೇಕು", ಎಂದು ಯೋಚಿಸುತ್ತ ಪಂಜರವನ್ನು ಕೈಗೆ ಎತ್ತಿಕೊಂಡು ನೋಡಿ ಖುಷಿಯಿಂದ ಅಲ್ಲಿಯೇ ಇಟ್ಟು. ಹಲ್ಲು ಕಿರಿಯುತ್ತಾ ಪಕ್ಕದಲ್ಲಿದ ಪೆದ್ದಣ್ಣನನ್ನು ಈ ಪಾರಿವಾಳಗ್ಳು ಯಾಕ್ ತಂದವ್ರೆ!" ಎಂದು ಪ್ರಶ್ನಿಸಿದ. ಪೆದ್ದಣ್ಣನ್ನು "ಏ. . .ಅದು ಗೊತಿಲ್ವ ಮಾರಾಯ ನಿಂಗಾ ಸಾಹೇಬ್ರು ಬಂದ ಮೇಲೆ ಅವುಗ್ಳನ ಆಕಾಶಕ ಹಾರಿ ಬಿಡ್ತರೆ ನೋಡ್ಕೋ" ಎಂದ. ಗುಟ್ಟಿಗೆ ಹಿಡಿದು "ಎಲ್ಲಾದ್ರು ಬಿಡ್ಕೋಳಿ ನಂಗೇಕೆ, ಪಾರ್ಕಲ್ಲಿರೋ ಪ್ರಾಣಿ ಎಲ್ಲಾ ಬಿಟ್ಟ ಬುಡಲಿ ನಂಗೇನಾಬೇಕು?"ಎಂದು ಸುಮ್ಮನಾದ. ಅಷ್ಟರಲ್ಲಿ ಜೀಪು, ಕಾರಗಳು ಸಾಲಗಿ ಬಂದು ನಿಂತವು, ದೊಡ್ಡ ದೊಡ್ಡ ಸಹೇಬರೆಲ್ಲ ಬಂದು ಇಳಿದುಕೊಂಡರು. ವೇದಿಕೆಯ ಮೇಲಿದ್ದ ಕುರ್ಚಿಗಳ ಮೇಲೆ ಕುಳಿತರು. ಕಾರ್ಯಕ್ರಮ ಶುರುವಾಯಿತು. ರೆಂಜರ್ ಆಫೀಸ್ನಲ್ಲಿ ಕ್ಲಾರ್ಕ್ ಅದೇನೇನೋ ಮೈಕಿನಲ್ಲಿ ಮಾತಾಡಿದ, ದೊಡ್ಡ ಸಾಹೇಬ್ರು ಬಂದು ದೀಪ ಹಚ್ಚಿ, ಪಾರಿವಾಳಗಳನ್ನು ಹಾರಿಬಿಟ್ಟರು.



ದೂರದಲ್ಲಿ ನೋಡುತ್ತಾ ನಿಂತಿದ್ದ ಗುಟ್ಟಿಯು, ಪಾರ್ಕಿನ ಬೋನಿನಲ್ಲಿ ಕೂಡಿಹಾಕಿದ ಪಾರಿವಾಳಗಳಿಗೆ ಜನಗಳಲ್ಲಿ ಚೆನ್ನಾಗಿ ರೂಢಿಯಾಗಿದ್ದರಿಂದ, ಹಾರಲು ಬಾರದೆ ಅಲ್ಲೆ ಪಕ್ಕದ ಬೆಂಚುಗಳ ಮೇಲೆ ಕುಳಿತ ಪಾರಿವಾಳಗಳನ್ನು ನೋಡಿದ್ದೇ ತಡ, ದೂರದಲ್ಲಿ ನಿಂತಿದ್ದ ಗುಟ್ಟಿಯು ಯಾವ ಆಫೀಸ್ರನ್ನು ಲೆಕ್ಕಿಸದೆ ಓಡಿಹೋಗಿ ಕುರ್ಚಿಗಳ ಮೇಲೆಲ್ಲ ಹಾರಾಡಿ ಪಾರಿವಾಳಗಳನ್ನು ಹಿಡಿದು, ತನ್ನ ಕಂಕುಳಲ್ಲಿ ಆ ಕಡೆ ಒಂದು, ಈ ಕಡೆ ಒಂದುನ್ನು ಇಟ್ಟುಕೊಂಡು ಕಾರ್ಯಕ್ರಮ ನೋಡುತ್ತಿದ್ದ ಜನಗಳ ಮಧ್ಯದಲ್ಲಿಯೇ ತನ್ನ ಹಲ್ಲುಗಳನ್ನು ಕಿಸಿಯುತ್ತಾ ಬರುವುದನ್ನು ನೋಡಿದ ವೆಂಕ್ಟಪ್ಪ ಗಾರ್ಡು, ರೆಂಜರುಗಳು ಇವನಿಗೆ ಸರಿಯಾಗಿ ಕತ್ನಮಾಡಬೇಕು ಎಂದು ಮನಸ್ಸಿನಲ್ಲೇ ಅಂದುಕೊಂಡು ನಾಟಕೀಯವಾಗಿ, ಅವನು ಇರುವುದೆ ಹೀಗೆ ಪೆದ್ದು ಪೆದ್ದು ಎಂಬಂತೆ ಮುಗುಳ್ನಗುತ್ತಾ, ಎದುರಿಗೆ ಬರುವ ಗುಟ್ಟಿಗೆ ಕೋಪವನ್ನು ತೋರಿಸದೆ ಹಾಗೆಯೇ ಅದುಮಿಟ್ಟಿಕೊಂಡರು.



ಗುಟ್ಟಿಯು ಮತ್ತೆ ಆ ಹಕ್ಕಿಗಳನ್ನು ಹಿಡಿದುಕೊಂಡಿದಕ್ಕೆ, ಅಲ್ಲಿಗೆ ಬಂದಿದ್ದ ದೊಡ್ಡ ಸಾಹೇಬರು ಆದ ಪಿಸಿಸಿಎಫ್ ಗುಟ್ಟಿಯನ್ನು ನೋಡಿ ಅವರಿಗೆ ಪ್ರಾಣಿ-ಪಕ್ಷಿಗಳೆಂದರೆ ತುಂಬ ಇಷ್ಟ ಇರಬೇಕು ಆದಕ್ಕೆ ಅವರು ಪಾರಿವಾಳಗಳನ್ನು ಇಡ್ಕೊಂಡಿದ್ದಾರೆ, ಯಾವುದೇ ಭಯ-ಮುಲಾಜು ಇಲ್ಲದೆ ವೇದಿಕೆಯಲ್ಲಿ ಬಂದು ಈ ಪಾರಿವಾಳಗಳನ್ನು ತೆಗೆದುಕೊಂಡರು. ಅದನ್ನು ಇಂಗ್ಲೀಷ್ನಲ್ಲಿ "**ಬ್ಲೂ ರಾಕ್ ಪಿಜನ್**" ಅಂತಾರೆ, ಮನುಷ್ಯರ ಹತ್ತಿರ ಚೆನ್ನಾಗಿ ಒಗ್ಗುವಂತಹ ಹಕ್ಕಿ ಇದು. ಅವರು ಬೇಕಾದ್ರೆ ತಗೊಂಡೋಗಿ ಮನೆಯಲ್ಲಿ ಸಾಕಿಕೊಳ್ಳಲಿ ಎಂದು ತಮ್ಮ ಭಾಷಣದಲ್ಲಿ ಹೇಳಿಕೊಂಡರು. ಗುಟ್ಟಿಗೆ ತುಂಬಾನೆ ಖುಷಿಯಾಯಿತು. ಜೊತೆಗೆ ಆ ಜನರ ನಡುವೆ ವೇದಿಕೆಯ ಅಕ್ಕಪಕ್ಕದಲ್ಲೆಲ್ಲ ಹುಡುಕಾಡಿ ಎಲ್ಲೋ ಅವಿತುಕೊಂಡಿದ್ದ ಪಾರಿವಾಳದ ಪಂಜರವನ್ನು ತೆಗೆದುಕೊಂಡು, ಅದರಲ್ಲಿ ಕಂಕುಳಲ್ಲಿದ್ದ ಪಾರಿವಾಳಗಳನ್ನು ಅದರಲ್ಲಿ ಇರಿಸಿದ. ಕಾರ್ಯಕ್ರಮ ಮುಗಿದ ಮೇಲೆ ಎದುರಿಗೆ ಸಿಕ್ಕ ವೆಂಕ್ಟಪ್ಪ ಗಾರ್ಡು ಮುಖವನ್ನು ಊದಿಸಿಕೊಂಡು "ಏ. . .ಗುಟ್ಟಿ! ಬುದ್ದಿಗಿದ್ದಿ ಇದಿಯಾ ನಿಂಗೆ, ಅಷ್ಟ್ ಜನದ ಮುಂದೆ ಹೋಗಿ ಆ ಪಾರಿವಾಳನ್ನ ಹಿಡಿದು ತಂದಿದಿಯಾ, ಅವರೆಲ್ಲ ಏನ್ ಅನ್ಕೋಬೇಕು!" ಎಂದ. "ಏ. . .ಅದ್ಯಾಕ್ ಅನ್ಕೋತಾರೆ ಸಾರ್, ಸಾಹೇಬ್ರೆ ಹೇಳಿಲ್ವ ತಂಗೊಂಡೋಗ್ಲಿ ಅಂತ, ಮತ್ತೆನೂ ನಿಮ್ದೂ ಬೇರೆ" ಎಂದು ರೇಗಿದ. ಆಯ್ತು ಬಿಡೋ ವೆಂಕ್ಟಪ್ಪ ಅವ್ನತ್ರ ಏನ್ ಮಾತು" ಎಂದ ಪೆದ್ದಣ್ಣ.

ಪಂಜರದಲ್ಲಿದ್ದ ಈ ಪಾರಿವಾಳಗಳು ತನ್ನ ಗಂಟಲನ್ನು ಉಬ್ಬಿಸಿ "*ಗುಟ್ರುರ್. . .ಗುಗ್. . . ಗುಟ್ರ್. . . ಗುಟ್ರುರ್. . .ಗುಗ್. . . ಗುಟ್ರ್. . .*" ಎಂದು ಕೂಗುತ್ತಿದ್ದವು. ಈ ಹಕ್ಕಿಗಳ ಕೂಗು ನಡವಳಿಕೆಯನ್ನು ಗಮನಿಸಿದ ಪೆದ್ದಣ್ಣನಿಗೂ, ನಾನು ಒಂದು ಸಾಕಿದರೆ ಚೆನ್ನಾಗಿರುತ್ತಿತ್ತೆಂದೆನಿಸಿತು. ಎನಿಸಿದರೂ ಎದುರಿಗಿದ್ದ ವೆಂಕ್ಟಪ್ಪಗಾರ್ಡನ್ನ ಕೋಪಗೊಂಡ ಮುಖವನ್ನು ನೋಡಿ ಸುಮ್ಮನಾದ ಪೆದ್ದಣ್ಣ.

**- ಅಶ್ವಥ ಕೆ. ಎನ್**






# ವಿದ್ಯಾರ್ಥಿಗಾಗಿ ವಿಜ್ಞಾನ

## ಕೊರೆಯುವ ಚಳಿಯಲ್ಲೂ ಬದುಕುವ ಕಾಡುಕಪ್ಪೆ.



ಆಲಾಸ್ಕಾದಲ್ಲಿನ ಕಾಡುಕಪ್ಪೆಗಳು ಕೊರೆಯುವ $-28^{0}$ ತಾಪಮಾನದಲ್ಲೂ ಬದುಕಬಲ್ಲದು. ಈ ಕಪ್ಪೆಯ ದೇಹದ ಮುಕ್ಕಾಲು ಭಾಗದಷ್ಟು ನೀರು ಹೆಪ್ಪುಗಟ್ಟಿದ್ದರೂ ಮತ್ತೆ ಬದುಕಬಲ್ಲವು. ಈ ಕಾಡುಗಪ್ಪೆಯ ದೇಹದಲ್ಲಿ ತಯಾರಾಗುವ *ಅಂಟೀ ಫ್ರೀಸ್* ರಾಸಾಯನಿಕದ ಸಹಾಯದಿಂದ ಕೊರೆಯುವ ಚಳಿಯಲ್ಲೂ ಬದುಕುಳಿಯಬಲ್ಲದು ಎಂದು ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಈ ಕಾಡುಕಪ್ಪೆಗಳ ಬಗ್ಗೆ ಸಂಶೋಧನೆ ನಡೆಸಿದ *ಮೈಮಿ ಯೂನಿವರ್ಸಿಟಿಯ ಜಾನ್ ಮತ್ತು ತಂಡದವರು* ಆಲಾಸ್ಕಾದ ಕಾಡುಗಳಿಂದ ಈ ಕಾಡುಗಪ್ಪೆಗಳನ್ನು ಸಂಗ್ರಹಿಸಿ ದೇಹರಚನೆಯನ್ನು ಪರೀಕ್ಷಿಸಿದಾಗ ಅದರ ದೇಹದ ಮಾಂಸಖಂಡಗಳಲ್ಲಿ ಉಪ್ಪಿನಂಶ ಹೆಚ್ಚಾಗಿರುವುದು ಕಂಡು ಬಂದಿದೆ. ಅಲ್ಲದೇ ಯೂರಿಯ ಹಾಗೂ ಗುರುತಿಸಲಾಗದ ಒಂದು ಹೊಸ ರಾಸಾಯನಿಕವೂ ಕೂಡ ಅದರ ದೇಹದಲ್ಲಿ ಪತ್ತೆಯಾಗಿದೆ. ಅದರಲ್ಲೂ ಈ ಕಾಡುಕಪ್ಪೆಯ ಮೆದುಳಿನಲ್ಲಿ ಈ ರಾಸಾಯನಿಕಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದೆ.

ಉಭಯಜೀವಿಗಳು ಕಡಿಮೆ ತಾಪಮಾನದಲ್ಲೂ ಬದುಕಬಲ್ಲವು, ಚಳಿಯನ್ನು ತಡೆದುಕೊಂಡು ಬದುಕಬಲ್ಲವು ಎಂದು ಜೀವವಿಜ್ಞಾನಿಗಳಿಗೆ ತಿಳಿದಿತ್ತು ಆದರೆ $-28^{0}$ ಉಷ್ಣತೆ ಯಲ್ಲೂ ಬದುಕಿ ಉಳಿದಿರುವ ಈ ಕಾಡುಕಪ್ಪೆಯ ಜಾತಿ ಅತಿ ಶೀತ ಪ್ರದೇಶದಲ್ಲೂ ಬದುಕುಳಿಯುವ ವಿಧಾನವನ್ನು ಜೀವವಿಕಾಸದಲ್ಲಿ ವಿಕಾಸ ಮಾಡಿಕೊಂಡು ಕೊರೆಯುವ ಚಳಿಯನ್ನು ತಡೆದುಕೊಂಡು ಬದುಕುತ್ತಿವೆ ಎಂದು ವಿಜ್ಞಾನಿಗಳು ವಾದಿಸುತ್ತಿದ್ದಾರೆ.

- ಶಂಕರಪ್ಪ ಕೆ.ಪಿ





# ಇರುವೆ ಮತ್ತು ಎಪಿಡ್

ಎಸ್. ಹೆಚ್. ಎಂದರೆ [Study house] ಎಂದು, ಸ್ವಲ್ಪ ಬಯಲು ಪ್ರದೇಶ ದಲ್ಲಿ ಇರುವ ಮನೆ. ಮನೆಯು ಮಾತ್ರ ೬೦ ವರ್ಷ ಹಳೆಯದೇ ಆದರೆ ಅಲ್ಲಿರುವ ನಾವೆಲ್ಲರು ಹೊಸಬರು. ಈ ಮನೆಯಲ್ಲಿ ೧೩ ಜನ ವಾಸಿಸುತ್ತಿದ್ದೇವೆ.

ಈಗ ಇದು ನಮ್ಮೆಲ್ಲರ ಮನೆ. ಮನೆಯ ಸುತ್ತಾ ಮುತ್ತ ನಾವೆಲ್ಲರು ಸೇರಿ ಹಲವು ಗಿಡಗಳನ್ನು ಹಾಕಿದ್ದೇವೆ. ಅವುಗಳಲ್ಲಿ ಕೆಲವು ಹೂಗಿಡಗಳು, ತರಕಾರಿಯ ಗಿಡಗಳು. ಇವುಗಳ ಜೊತೆಯಲ್ಲಿಯೇ ಕಳೆ ಸಸಿಗಳು ಬೆಳೆದಿವೆ . ಅವುಗಳಲ್ಲಿ ಈ ಗಿಡವು ಒಂದು. ಈ ಗಿಡದ ಹೆಸರೇ ಯುಪಟೋರಿಯಂ. ಈ ಸಸ್ಯವನ್ನ ಹಲವು ಕೀಟಗಳು ಅವಲಂಬಿಸಿವೆ [ಬೇರೆ ಕೀಟಗಳಿಗೆ ಆಸರೆ ಯಾಗಿದೆ]. ಯುಪಟೋರಿಯಂ ನಲ್ಲಿ ಕಾಣಸಿಗುವ ಕೀಟಗಳೆಂದರೆ 'ಇರುವೆ' ಮತ್ತು 'ಎಪಿಡ್''.



ಇದರಲ್ಲಿ ಆಶ್ಚರ್ಯವೇನು ಎಂದು ನಿಮಗನಿಸಬಹುದು. ಎಪಿಡ್ ಗೂ ಇರುವೆಯ ನಡುವೆ ಒಂದು ಬಿಡಲಾರದ ಸಂಭಂದವಿದೆ. ಅದು ನಮಗೂ ಮತ್ತು ಪಶುವಿನ ನಡುವಿನ ಸಂಬಂಧದಂತೆ. ಹಸುವು ಹಾಲು ಕೊಡುತ್ತದೆ ಎಂದು ನಾವು ಸಾಕುತ್ತೇವೆ. ಏಕೆಂದರೆ ಹಾಲಿನಿಂದ ನಮಗೆ ತುಂಬಾ ಉಪಯೋಗ ಮತ್ತು ಲಾಭವಿರುವುದರಿಂದ ನಾವು ಪಶುವನ್ನು ಸಾಕುತ್ತೇವೆ. ಹಾಗೆಯೇ ಇರುವೆಗೂ ಮತ್ತು ಎಪಿಡ್ ಗಳ ನಡುವೆ ಅದೇರೀತಿಯ ಒಂದು ಸಂಬಂಧವಿದೆ. ಸಾಮಾನ್ಯವಾಗಿ ಏಪಿಡ್ ಇರುವಜಾಗದಲ್ಲಿ ಇರುವೆ ಇರುತ್ತದೆ ಏಕೆಂದರೆ ಈ ಕೀಟಗಳು ಬಿಡುವ ಒಂದು ಹನಿ ಸಿಹಿ ನೀರಿಗಾಗಿ ಇರುವೆಗಳು ಅವುಗಳಜೊತೆಯಲ್ಲಿ ಇರುತ್ತವೆ.ಮನುಷ್ಯರು ಹಸುವನ್ನು ಕ್ರೂರ ಪ್ರಾಣಿಗಳಿಂದ ರಕ್ಷಿಸುವಹಾಗೆ ಇರುವೆಗಳು ಕೂಡ ಏಪಿಡ್ ಗಳನ್ನು ಬೇರೆ ಪ್ರಾಣಿ-ಪಕ್ಷಿಗಳಿಂದ ರಕ್ಷಿಸುತ್ತವೆ ಏಕೆಂದರೆ ಇರುವೆಗಳಿಗೆ ಏಪಿಡ್ ಕೊಡುವ ಸಿಹಿ ಹನಿಗಳು ಬೇಕಾಗಿರುವುದರಿಂದ ತಮ್ಮ ಪ್ರಾಣವನ್ನು ಕೊಟ್ಟು ಇವುಗಳ ಪ್ರಾಣವನ್ನು ಉಳಿಸುತ್ತವೆ.

- ಧನರಾಜ್ .ಎಂ





# ಮಳೆಗಾಲದಲ್ಲಿ

ಮುಂಗಾರು ಮಳೆಗಾಲದಲ್ಲಿ
ಹಸಿರುಹಾಸು ಅಂಗಳದಲಿ
ಸೋನೆಮಳೆಯು ಹಕ್ಕಿ ಹಾಡಲಿ
ಬಿಸಿಲು ಮಳೆಯು ಕಾಮನಬಿಲ್ಲಲಿ

ತುಂತುರು ಮಳೆಯು ಸಂಜೆಹೊತ್ತಲಿ
ಹನಿ ನೀರಿಂದ ಪತಂಗ ಸ್ಪರ್ಶ ಹೂವಿಗಿಲ್ಲಿ
ಮಳೆಯ ನೀರ ಸಿಂಚನ ಹಳೆ ಬೇರು ಚಿಗುರಲಿ
ಧರೆಯ ತಂಪು ಮೊಳಕೆ ಮಣ್ಣಲಿ

ಹಕ್ಕಿಗಳಿಂಚರ ಸಂಜೆ ಹೊತ್ತು ಮಳೆಯಲಿ
ಪ್ರಕೃತಿಯ ಮಡಿಲ ಗೂಡಿನಲಿ
ಮೈತುಂಬಿ ಹರಿಯೋ ಜಲಧಾರೆಯಲ್ಲಿ
ಸ್ವಾಗತ ತಾಣ ಮಳೆಗಾಲ ಪರಿಸರ ಸ್ನೇಹಕ್ಕಿಲ್ಲಿ

ಮುಂಗಾರು ಮಳೆಗೆ ಝುರಿ ತೊರೆಯಲಿ
ಬರಿದಾದ ಕೆರೆಯ ತುಂಬೆಲ್ಲಾ ನೀರಲ್ಲಿ
ಸುದ್ದಿ ಕನಸ ಹೊತ್ತು  ರೈತನಿಗೆ ನನಸಿಲ್ಲಿ
ಹಿಂಗಾರು ಮಳೆಯೋ ಸಂಪತ್ತು ಉಳಿಸಿಲ್ಲಿ

\- ಕೃಷ್ಣನಾಯಕ್